ಪ್ರತಿಯೊಂದು ಪುಟವು ಎಷ್ಟು ಮೋಹಕವಾಗಿದೆಯೆಂದರೆ ಪ್ರತಿ ಪುಟದ ನಾಲ್ಕೂ ಅಂಚುಗಳು ಬಣ್ಣದ ಹೂಗಳಿಂದ ಅಲಂಕರಿಸಲ್ಪಟ್ಟಿವೆ. 'ಉದ್ಧರಣೆಯ ಪಟಲ' ಮತ್ತು 'ಅಶ್ವ ಪರೀಕ್ಷೆ' ಹಸ್ತಪ್ರತಿಗಳಂತೂ ಸಚಿತ್ರ ಹಸ್ತಪ್ರತಿಗಳಾಗಿವೆ. ಮುಮ್ಮಡಿ ಕೃಷ್ಣರಾಜ ಒಡೆಯರು ರಚಿಸಿದ ಮಹಾಭಾರತದ ಹಸ್ತಪ್ರತಿ 36 ಅಂಗುಲ ಉದ್ದವಿದೆ. ಹಸ್ತಪ್ರತಿಗಳು ಅರಮನೆ, ಗುರುಮನೆ, ದೇವಾಲಯ, ಬಸದಿಗಳಲ್ಲಿ ದೊರೆಯುತ್ತವೆ. ನಮ್ಮ ಹಿರಿಯ ತಲೆಮಾರಿನ ವಿದ್ವಾಂಸರು ಊರೂರು ತಿರುಗಿ ಕ್ಷೇತ್ರ ಕಾರ್ಯ ಮಾಡಿ ಹಸ್ತಪ್ರತಿ ಸಂಗ್ರಹಿಸಿದ್ದಾರೆ. ಈಗಲೂ ಕ್ಷೇತ್ರ ಕಾರ್ಯದ ಮೂಲಕವೇ ಹಸ್ತಪ್ರತಿಗಳನ್ನು ಸಂಗ್ರಹಿಸಬೇಕು. ಇವುಗಳ ಬಗ್ಗೆ ಅರಿವಿದ್ದವರು ತಮ್ಮ ಮನೆಯಲ್ಲಿ ಹಸ್ತಪ್ರತಿ ಇದ್ದರೆ ಸ್ವಇಚ್ಛೆಯಿಂದ ತಂದುಕೊಡುವುದೂ ಉಂಟು.



◆ **ಪಂಪಾದಿ ಕವಿಗಳ ಹಳಗನ್ನಡ ಕೃತಿಗಳ ಹಸ್ತಪ್ರತಿಗಳನ್ನು ಪಠ್ಯವಾಗಿಸಿದ ಸಂಪಾದನಾಕಾರರು ಮತ್ತು ಅವರು ಸಂಪಾದಿಸಿದ ಮಹತ್ವದ ಕೃತಿಗಳ ಕುರಿತು ಮಾತಾಡಬಹುದೆ?**

ನಮ್ಮಲ್ಲಿ ಪಂಪನಂಥ ಕವಿಯ ಮಹತ್ವದ ಕೃತಿಗಳ ಪಠ್ಯದ ಬಗ್ಗೆ ಬಹಳ ಚರ್ಚೆಗಳು ನಡೆದಿವೆ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಪಂಪ ಸಂಪುಟದಲ್ಲಿ ಹಿಂದಿನ ಪರಿಷ್ಕರಣಗಳ ಕೆಲವು ಪಾಠಗಳನ್ನು ಸರಿಪಡಿಸಿದ್ದಾರೆ. ಕವಿಯ ಸ್ವಹಸ್ತಾಕ್ಷರದ ಪ್ರತಿ ಇಲ್ಲದಿದ್ದಾಗ ಕವಿಯ ಗೈರು ಹಾಜರಿಯಲ್ಲಿ ಪ್ರತಿ ಮಾಡಿದ ಲಿಪಿಕಾರರ ಹಸ್ತಪ್ರತಿಯನ್ನು ಇಟ್ಟುಕೊಂಡು ಕವಿಯ ಪಠ್ಯವನ್ನು ಕಟ್ಟಿಕೊಡಬೇಕಾಗುತ್ತದೆ. ಲಿಪಿಕಾರರ ಪಠ್ಯದಲ್ಲಿ ಸ್ಖಾಲಿತ್ಯಗಳು ದೋಷಪೂರ್ಣ ಪಾಠಗಳು ತುಂಬಿರುತ್ತವೆ. ಆದುದರಿಂದ ಸಂಪಾದಿತ ಕೃತಿಗಳಿಗೆ ಮಹತ್ವವಿದೆ. ಸಂಪಾದಕರ ಸಾಮರ್ಥ್ಯಕ್ಕೆ ಅನುಗುಣವಾಗಿ ಅವರು ಪ್ರಕಟಿಸಿದ ಪಠ್ಯಗಳಿರುತ್ತವೆ.

◆ **ಗ್ರಂಥ ಸಂಪಾದನಾ ಕಾರ್ಯದಲ್ಲಿ ಎನ್. ಬಸವರಾಧ್ಯ, ಎಂ.ಎಂ. ಕಲಬುರ್ಗಿ ಅವರಂತಹ ವಿದ್ವಾಂಸರೊಂದಿಗೆ ಕೆಲಸ ಮಾಡುವಾಗಿನ ಅನುಭವಗಳೇನು? ಅದು ನಿಮ್ಮ ಗ್ರಂಥ ಸಂಪಾದನೆಯ ಕೆಲಸಕ್ಕೆ ಹೇಗೆ ನೆರವಾಯಿತು?**

ಎಂ.ಎ. ವ್ಯಾಸಂಗ ಮಾಡುವಾಗ ನಮ್ಮ ಗುರುಗಳಾದ ಎಸ್.ವಿ. ಪರಮೇಶ್ವರಭಟ್ ಅವರು ಡಿ.ಎಲ್. ನರಸಿಂಹಾಚಾರ್ ಅವರ ಸಂಶೋಧನೆಗಳ ಬಗ್ಗೆ ಬಹಳಷ್ಟು ಹೇಳುತ್ತಿದ್ದರು. ನನಗೆ ಅರಿವಿಲ್ಲದೆಯೆ ಈ ಬಗ್ಗೆ ಸುಪ್ತ ಪ್ರಜ್ಞೆಯಲ್ಲಿ ಒಲವು ಮೂಡಿತ್ತು. ಈ ಕಾರಣದಿಂದಾಗಿಯೇ ಸಂಪಾದನ ವಿಭಾಗ ಸೇರಿಕೊಂಡೆ. ಆ ಸಂದರ್ಭದಲ್ಲಿ ಹಾ.ಮಾ. ನಾಯಕರು ಸಂಸ್ಥೆಯ ನಿರ್ದೇಶಕರು. ಎನ್. ಬಸವಾರಾಧ್ಯರು ಉಪನಿರ್ದೇಶಕರಾಗಿದ್ದರೆ, ಬಿ.ಎಸ್. ಸಣ್ಣಯ್ಯನವರು ಸಹಾಯಕ ನಿರ್ದೇಶಕರಾಗಿದ್ದರು. ಅವರಲ್ಲಿ ಗ್ರಂಥ ಸಂಪಾದನೆಯ ಓನಾಮವನ್ನು ಕಲಿತೆ. ಹಸ್ತಪ್ರತಿ ಓದುಗಾರಿಕೆ, ಪ್ರತಿ ಮಾಡುವುದು, ಪಾಠಾಂತರ ಸಂಕಲನ, ನಿಘಂಟು ಪರಿಶೀಲನೆ, ಅರ್ಥಕೋಶ ರಚನೆ ಹೀಗೆ ಪರಿಷ್ಕರಣದ ಪೂರ್ವಭಾವಿ ಪ್ರಕ್ರಿಯೆಗಳನ್ನು ಹಿರಿಯರಿಂದ ಕಲಿತೆ. ಗ್ರಂಥ ಸಂಪಾದನೆಯ ವಿಧಿವಿಧಾನಗಳನ್ನು ಕಲಿತ ಪ್ರಥಮ ಘಟ್ಟವದು. ನನ್ನ